**ದಿನಾಂಕಃ 08.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>ಮುಖ್ಯ ವಿಚಾರಣೆ : ಶ್ರೀ ಜಿ ಎಸ್., ವಾದಿ ಪರ ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಸಾಕ್ಷಿಯೂ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಇ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀ ಕೆ ಟಿ., ಪ್ರತಿವಾದಿ ಪರ ವಕೀಲರಿಂದ</u>**

**2.** ಆ ದಿನ ಕ್ರಯದಕರರು ಪತ್ರ ಬರೆಸಲು ವಾದಿ ಮತ್ತು ಪ್ರತಿವಾದಿಯರಿಬ್ಬರು ಜೊತೆಯಲ್ಲಿ ಬಂದಿರುತ್ತಾರೆ. ಅವರ ಜೊತೆ ಇಬ್ಬರು ಸಾಕ್ಷಿದಾರರು ಕೂಡ ಬಂದಿದ್ದರು. ಕ್ರಯದ ಕರರು ಪತ್ರವನ್ನು ಬರೆಯುವ ಮೊದಲು ಸ್ವತ್ತು ಯಾರಿಗೆ ಸೇರಿರುತ್ತದೆ ಎಂದು ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ ಎಂದರೆ ಸರಿ. ನಾನು ಆ ದಿನ ದಾವಾ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ನೋಡಿರುವುದಿಲ್ಲ. ಸಾಕ್ಷಿಯೂ ಮುಂದುವರೆದು ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಿದರೆ ಮಾತ್ರ ನಾನು ದಾಖಲೆಗಳನ್ನು ಪರಿಶೀಲಿಸುತ್ತೇನೆ ಇಲ್ಲದಿದ್ದರೆ ನೋಡುವುದಿಲ್ಲ ಎಂದು ನುಡಿಯುತ್ತಾರೆ.

**3.** ಕ್ರಯದ ಕರಾರು ಪತ್ರವನ್ನು ಬರೆಸಲು ಎಲ್ಲರೂ ಬೆಳಿಗ್ಗೆ 11.00 ಗಂಟೆಗೆ ಬಂದಿರುತ್ತಾರೆ. ಅವರು ಹೇಳಿದ್ದನ್ನು ಮೊದಲು ಕೈಯಿಂದ ಬರೆದುಕೊಂಡು ನಂತರ ಟೈಪ್ ಮಾಡಿಸಿಕೊಂಡು ಬಂದಿರುತ್ತೇನೆ. ಸದರಿ ಕ್ರಯದ ಕರಾರು ಪತ್ರವನ್ನು ಡಿಎಲ್ ಡಿ ಬ್ಯಾಂಕ್ ಬಳಿ ಇರುವ ಒಂದು ಟೈಪಿಂಗ್ ಸೆಂಟರ್ ನಲ್ಲಿ ಟೈಪ್ ಮಾಡಿಸಿರುತ್ತೇನೆ. ಸದರಿ ಟೈಪಿಂಗ್ ಸೆಂಟರ್ ಯಾರಿಗೆ ಸೇರಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಸಾಮಾನ್ಯವಾಗಿ ಎಲ್ಲಾ ದಾಖಲೆಗಳನ್ನು ಅವರ ಬಳಿಯೇ ಟೈಪ್ ಮಾಡಿಸುತ್ತೇನೆ. ಕೈಯಿಂದ ಬರೆದ ಕರಡು ಪ್ರತಿಯನ್ನು ನಾನು ಇಟ್ಟುಕೊಳ್ಳುವುದಿಲ್ಲ. ಬಾಂಡ್ ಪೇಪರ್ ನ್ನು ಆ ದಿನ ಯಾರು ತೆಗೆದುಕೊಂಡು ಬಂದರು ಎಂದು ನೋಡಿರುವುದಿಲ್ಲ.

**4.** ನನಗೆ ಈಗ ತೋರಿಸುತ್ತಿರುವ ನಿಪಿ-1 ಕ್ರಯದ ಕರಾರು ಪತ್ರದಲ್ಲಿ ಪಸ್ಟ್ ಪಾರ್ಟಿ ವಿಶ್ವನಾಥ/ಪ್ರತಿವಾದಿ ಹಾಗೂ ಸೆಕೆಂಡ್ ಪಾರ್ಟಿ ಶ್ರೀನಿವಾಸ ಬಿನ್ ಕೃಷ್ಣಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಕ್ರಯದ ಕರಾರು ಪತ್ರವನ್ನು ಟೈಪ್ ಮಾಡಿಸಿದ ನಂತರ ಸಹಿ ಮಾಡಿಸಲು ಕೊಟ್ಟಿರುತ್ತೇನೆ.

**5.** ನಿಪಿ-1 ರ ಕ್ರಯದ ಕರಾರು ಪತ್ರವನ್ನು ತುಂಬಾ ಸಣ್ಣ ಅಕ್ಷರಗಳಲ್ಲಿ ಟೈಪ್ ಮಾಡಿಸಲಾಗಿದೆ ಎಂದರೆ ಸರಿ. ಯಾವ ಕಾರಣಕ್ಕೆ ಸಣ್ಣ ಅಕ್ಷರಗಳಲ್ಲಿ ಟೈಪ್ ಮಾಡಲಾಗಿದೆ ಎಂದರೆ ಸಾಕ್ಷಿಯೂ ಅವರು ಟೈಪ್ ಮಾಡುವುದೇ ಸಣ್ಣ ಅಕ್ಷರಗಳಲ್ಲಿ ಎಂದು ನುಡಿಯುತ್ತಾರೆ. ಬಾಂಡ್ ಪೇಪರ್ ನಲ್ಲಿ ಕೆಳಗೆ ತುಂಬಾ ಖಾಲಿ ಜಾಗವನ್ನು ಬಿಡಲಾಗಿದ್ದು ಯಾವ ಕಾರಣಕ್ಕೆ ಬಿಡಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯೂ ಮಾರಾಟಗಾರರು ಹಾಗೂ ಖರೀದಿದಾರರ ಹೆಸರುಗಳು ಮಾತ್ರ ಮೊದಲನೇ ಪುಟಕ್ಕೆ ಬರಬೇಕು ಇನ್ನುಳಿದ ಒಕ್ಕಣಿಕೆಗಳು ಮುಂದಿನ ಪುಟಕ್ಕೆ ಹೋಗಬೇಕೆಂದು ನುಡಿಯುತ್ತಾರೆ . ಈ ರೀತಿ ಯಾವುದೇ ಕಾನೂನು ಇರುವುದಿಲ್ಲ ಎಂದರೆ ಸರಿ. 2 ನೇ ಪುಟದಲ್ಲಿ ಸ್ವಲ್ಪವೂ ಕೂಡ ಮಾರ್ಜಿನ್ ಬಿಟ್ಟಿಲ್ಲ ಎಂದರೆ ಸರಿ. ಯಾವ ಕಾರಣಕ್ಕೆ ಮಾರ್ಜಿನ್ ಬಿಟ್ಟಿರುವುದಿಲ್ಲ ಎಂದರೆ ಸಾಕ್ಷಿಯೂ ಟೈಪಿಂಗ್ ಮಾಡುವವರು ಮಾಡುತ್ತಾರೆ ನಾನೇನೂ ಮಾಡಲಿ ಎಂದು ನುಡಿಯುತ್ತಾರೆ.

**6.** ಕ್ರಯದಾರರ ಸಹಿಯೂ ನನ್ನ ಸಹಿಯ ಮೇಲೆ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕ್ರಯದಾರರ ಸಹಿ ಖರೀದಿದಾರರ ಸಹಿಯ ಸಮಭಾಗದಲ್ಲಿ ಬರಬೇಕು ಎಂದರೆ ಸಾಕ್ಷಿಯೂ ಟೈಪಿಂಗ್ ಮಾಡಿರುವವರು ಮಾಡಿರುತ್ತಾರೆ ನಾನೇನೂ ಮಾಡಲಿ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರದ ಮೊದಲನೇ ಪುಟದಲ್ಲಿ ಖರೀದಿದಾರರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯೂ ಸಾಮಾನ್ಯವಾಗಿ ನೊಂದಣಿ ಮಾಡಿಕೊಳ್ಳದಾ ಕ್ರಯದ ಕರಾರು ಪತ್ರದಲ್ಲಿ ಖರೀದಿದಾರರ ಸಹಿಯನ್ನು ನಾನು ಪಡೆಯುವುದಿಲ್ಲ ಎಂದು ನುಡಿಯುತ್ತಾರೆ.

**7.** ಸಾಮಾನ್ಯವಾಗಿ ಯಾವುದೇ ಪತ್ರವನ್ನು ಬರೆದರೆ ನಾವು ಒಂದು ಲೆಡ್ಜರ್ ಪುಸ್ತಕವನ್ನು ಇಟ್ಟುಕೊಳ್ಳಬೇಕು ಎಂದರೆ ಸಾಕ್ಷಿಯೂ ನಾನು ಏಕೆ ಇಟ್ಟುಕೊಳ್ಳಲಿ ನಾನು ವಕೀಲ ಎಂದು ನುಡಿಯುತ್ತಾರೆ. ನಿಪಿ-1 ರ ಕ್ರಯದ ಕರಾರು ಪತ್ರದಲ್ಲಿರುವ 2 ನೇ ಪುಟದಲ್ಲಿ ನನ್ನ ಮೊಹರು-ಸೀಲ್ ನಲ್ಲಿ ಪತ್ರ ಬರಹಗಾರರು ಎಂದು ನಮೂದು ಇರುತ್ತದೆ

ಎಂದರೆ ಸರಿ. ಹಾಗಾದರೆ ನಾನು ಯಾವ ಆಧಾರದ ಮೇಲೆ ಪತ್ರ ಬರಹಗಾರ ಎಂದು ಸಹಿ ಮಾಡಿರುತ್ತೇನೆಂದರೆ ಸಾಕ್ಷಿಯೂ ಉತ್ತರಿಸದೇ ಸುಮ್ಮನೇ ನಿಂತಿರುತ್ತಾರೆ. ನಾನು ನಿಪಿ-1(ಇ) ನೇದ್ದರ ಸಹಿಯನ್ನು ವಕೀಲ ಎಂದು ಸಹಿ ಮಾಡಿರುತ್ತೇನೆ, ಪತ್ರ ಬರಹಗಾರನಾಗಿ ಸಹಿ ಮಾಡಿರುವುದಿಲ್ಲ.

**8.** ನನ್ನ ಸಮಕ್ಷಮ ಹಣವನ್ನು ಕೊಟ್ಟಿರುವುದಿಲ್ಲ. ವಾದಿ ಕೃಷ್ಣ ಮೂರ್ತಿ, ಸಾಕ್ಷಿದಾರರು ಹಾಗೂ ನಾನು ಸೇರಿಕೊಂಡು ನಿಪಿ-1 ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಂದೆ ಯಾರು ಕೂಡ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.